1995	62,507
1996	81,709
1997	84,857
1998	5,045

(ಸೆಪ್ಟೆಂಬರ್ 98ರವರೆಗೆ)

ಇ) ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ 1991ರಿಂದ ಸೆಪ್ಟೆಂಬರ್ 97ರವರೆಗೆ 90,316 ಕ್ರಿಮಿನಲ್ ಹಾಗೂ ಸಿವಿಲ್ ಪ್ರಕರಣಗಳು) ಪ್ರಕರಣಗಳು ಬಾಕಿ ಇರುತ್ತಿವೆ.

ಈ) ಈ ಪ್ರಶ್ನೆಯು ಉಚ್ಚ ನಾಯ್ಯಾಲಯದ ಪರಿಧಿಯಲ್ಲಿ ಬರುವುದರಿಂದ ರಾಜ್ಯ ಸರ್ಕಾರ ಕಾರಣಗಳನ್ನು ನೀಡಲು ಸಾಧ್ಯವಿರುವುದಿಲ್ಲ.

ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಸಂಗ್ರಹಿಸಲ್ಪಟ್ಟ ಮೊಬಲಗು.

2917:(3884)

ಶ್ರೀ.ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1996-97 ಮತ್ತು 1997-98ರ ಸಾಲಿನಲ್ಲಿ ಸಂಗ್ರಹಿಸಲ್ಪಟ್ಟ ವಾಣಿಜ್ಯ ತೆರಿಗೆ ಮೊಬಲಗು ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) 1996-97 ಮತ್ತು 1997-98ರ ಸಾಲಿನಲ್ಲಿ ತೆರಿಗೆ ವಸೂಲಿಯಾಗದೆ ಬಾಕಿಯಿರುವ ಪ್ರಕರಣಗಳೆಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ತೆರಿಗೆ ವಸೂಲಿಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು):

ಅ)

ವಿಭಾಗ	ಸಂಗ್ರಹಣೆ	
	1996-97	1997-98
	(ರೂ. ಕೋಟಿಗಳಲ್ಲಿ)	
1) ವೇಗ ಮಾರ್ಗ-1	950.56	1,086.38
2) ವೇಗ ಮಾರ್ಗ-2	554.00	618.70
3) ಕೃಷಿ ವರಮಾನ ತೆರಿಗೆ	39.50	32.30
4) ಬೆಂಗಳೂರು ನಗರ ವಿಭಾಗ-1	507.99	563.14
5) ಬೆಂಗಳೂರು ನಗರ ವಿಭಾಗ-2	233.20	235.81
6) ಬೆಂಗಳೂರು ನಗರ ವಿಭಾಗ-3	216.29	222.32
7) ಬೆಂಗಳೂರು ನಗರ ವಿಭಾಗ-4	292.03	304.83
8) ಬೆಂಗಳೂರು ವಿಭಾಗ	239.09	252.57
9) ಮೈಸೂರು ವಿಭಾಗ	128.29	120.25
10) ಮಲ್ನಾಡ್ ವಿಭಾಗ	84.40	82.40
11) ಮಂಗಳೂರು ವಿಭಾಗ	216.01	234.06
12) ಧಾರವಾಡ ವಿಭಾಗ	196.28	195.10
13) ಬೆಳಗಾಂ ವಿಭಾಗ	170.48	177.33
14) ಗುಲ್ಬರ್ಗ ವಿಭಾಗ	124.56	115.28
15) ದಾವಣಗೆರೆ ವಿಭಾಗ	106.14	110.20
16) ಗುಪ್ತ ವಾರ್ತೆ	21.80	50.00
17) ಇತರೆ ಇಲಾಖೆಗಳ ಮೂಲಕ	30.00	31.80
ಒಟ್ಟು	4110.63	4432.47
	(ವಿವಿಧ ವಿಭಾಗಗಳ ತೆರಿಗೆ ಸಂಗ್ರಹಣೆ ವರದಿಗಳ ಆಧಾರದ ಅಂಕಿ ಅಂಶಗಳು)	

ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ವಿಭಾಗವಾರು ವ್ಯವಸ್ಥೆ ಇರುವುದರಿಂದ ವಿಭಾಗಾವಾರು ಮಾಹಿತಿಯನ್ನು ಒದಗಿಸಲಾಗಿದೆ.

ಆ) 1996-97ನೇ ಸಾಲಿಗೆ (31-3-97)ಕ್ಕೆ ಕೊನೆಗೊಂಡಂತೆ ಎಲ್ಲಾ ವಿಭಾಗಗಳಲ್ಲಿ ಒಟ್ಟು ರೂ.734.60 ಕೋಟಿಗಳಷ್ಟು ತೆರಿಗೆ ಬಾಕಿ ಇರುತ್ತದೆ. 1997-98ನೇ ಸಾಲಿಗೆ (31-3-97)ಕ್ಕೆ ಕೊನೆಗೊಂಡಂತೆ ಎಲ್ಲಾ ವಿಭಾಗಗಳಲ್ಲಿ ಒಟ್ಟು ರೂ.783.02 ಕೋಟಿಗಳಷ್ಟು ತೆರಿಗೆ ಬಾಕಿ ಇರುತ್ತದೆ. (ನಿಖರವಾದ ಪ್ರಕರಣವಾರು ಮಾಹಿತಿಯು ಸದ್ಯಕ್ಕೆ ಲಭ್ಯವಿರುವುದಿಲ್ಲ)

ಇ) ವಾಣಿಜ್ಯ ತೆರಿಗೆ ಇಲಾಖೆಯ ಅಧೀನದಲ್ಲಿರುವ ಎಲ್ಲಾ ಅಧಿನಿಯಮಗಳಡಿ ಲಭ್ಯವಿರುವ ವಿಧಾನಗಳನ್ನು ಅನುಸರಿಸಿ ಬಾಕಿ ವಸೂಲಾತಿಗೆ ತಕ್ಕ ಕ್ರಮ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆಗಳನ್ನು ನೀಡಲಾಗುತ್ತಿದೆ.

ಉಪ್ಪಿನಂಗಡಿ-ಸುಬ್ರಹ್ಮಣ್ಯ ರಸ್ತೆ ಡಾಂಬರೀಕರಣ

2919:(3918)

ಡಿ.ವಿ.ಸದಾನಂದ ಗೌಡ (ಪುತ್ತೂರು) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಉಪ್ಪಿನಂಗಡಿ ಸುಬ್ರಹ್ಮಣ್ಯ ರಸ್ತೆ ಕಳೆದ ಎಷ್ಟು ವರ್ಷಗಳಿಂದ ಡಾಂಬರೀಕರಣ ಮಾಡಿಲ್ಲ? ಅದನ್ನು ಯಾವಾಗ ಮಾಡಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

1) ಕಳೆದ 15 ವರ್ಷಗಳಿಂದ ಡಾಂಬರೀಕರಣ ಮಾಡಿರುವುದಿಲ್ಲ. ವಾರ್ಷಿಕ ದುರಸ್ತಿ ಮಾಡಲಾಗುತ್ತಿದೆ. ಅನುದಾನದ ಲಭ್ಯತೆಯ ಮೇರೆಗೆ ಮರು ಡಾಂಬರೀಕರಣ ಮಾಡಲಾಗುವುದು.

ಮೈಸೂರಿನ ಕುಂಬಾರ ಕೊಪ್ಪಲಿನಲ್ಲಿರುವ ಕ್ರೀಡಾಂಗಣ ಅಭಿವೃದ್ಧಿ.

2920:(3954)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಕುಂಬಾರ ಕೊಪ್ಪಲ್ಲಿನಲ್ಲಿರುವ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಆ) ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?